ವಿಚಾರ ಬರುತ್ತಿದೆ ಒಂದು ಕಡೆ ಸಾರ್ವಜನಿಕರ ವಂತಿಗೆ ಬೇಡ ಎಂದು ಹೇಳಿ, ಇನ್ನೊಂದು ಕಡೆ ಸರ್ಕಾರವೇ ಎಲ್ಲ ಶಾಲಾ ಕಟ್ಟಡಗಳನ್ನು ಕಟ್ಟಿಸಬೇಕು ಎಂದು ಹೇಳಿದರೆ ಹೇಗೆ? ಈಗ ಸುಮಾರು ಮೂವತ್ತು ಸಾವಿರ ಸ್ಕೂಲ್ ರೂಮುಗಳು ಬೇಕಾಗುತ್ತವೆ. ಇದಕ್ಕೆ ವರ್ಷಗಳು ಬೇಕಾಗುತ್ತದೆ? ಒಂದು ವರ್ಷಕ್ಕೆ ಐದು ಸಾವಿರ ಶಾಲಾ ರೂಮುಗಳನ್ನು ಕಟ್ಟಿಸುತ್ತೇವೆ ಎಂದರೆ, ಮೂವತ್ತು ಸಾವಿರ ಶಾಲಾ ರೂಮುಗಳನ್ನು ಕಟ್ಟಿಸುವುದಕ್ಕೆ ಆರು ವರ್ಷಗಳು ಬೇಕಾಗುತ್ತವೆ? ಈ ಒಂದು ದೃಷ್ಟಿಯನ್ನಿಟ್ಟು ಕೊಂಡು ಮಂತ್ರಿಮಂಡಲದಲ್ಲಿ ಚರ್ಚೆ ಮಾಡಲಾಗಿದೆ. ಈಗ ಪಿಡ್ಲ್ಯೂಡಿ ಸ್ಪೆಸಿಫಿಕೇಷನ್ ಮೇರೆಗೆ ಕಟ್ಟಿರತಕ್ಕ ಕಟ್ಟಡಗಳು ರಿಪೇರಿಗೆ ಬರುವುದಿಲ್ಲವೇ? ಅದು ಬೀಳುವುದಿಲ್ಲವೆ? ಇವೆಲ್ಲಾ ಪ್ರಶ್ನೆಗಳು ಬರತ್ತವೆ. ಆದುದರಿಂದ, ಲೋಕಲ್ ಇನಿಷಿಯೆಟೀವ್ ಏನು ಇದೆ, ಅದನ್ನೇ ಉಪಯೋಗಿಸಿ ಶಾಲಾ ಕಟ್ಟಡಗಳನ್ನು ಕಟ್ಟಿಸುವ ವಿಚಾರ ಇದೆ ಸದ್ಯಕ್ಕೆ, ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ವಂತಿಗೆ ಕೊಡುಕೂಡದು, ಸರ್ಕಾರ ಕೊಡುವ ಹಣದ ಜೊತೆಗೆ ಸಾರ್ವಜನಿಕರಿಂದ ವಂತಿಗೆಯನ್ನು ಸಂಗ್ರಹಣೆ ಮಾಡಬೇಕೆನ್ನುವುದು ಇದೆ. ಇದು ಮುಂದೆ ಏನಾಗುತ್ತದೆ ಎಂಬುದನ್ನು ನೋಡೋಣ. ವಂಂದೆ, ಏನಾದರೂ ಮಾರ್ಪಾಡು ಮಾಡಬೇಕೆಂದರೆ ಮಾಡೋಣ. ಸದ್ಯಕ್ಕೆ ಸರ್ಕಾರದವರು ಈ ವ್ಯವಸ್ಥೆಯನ್ನು ಮಂಜೂರು ಮಾಡಿದ್ದಾರೆ.

MADAM SPEAKER.—The quest on is :

"That the Karnataka (Enhancement of certain Cesses) Bill, 1976 be taken into consideration."

The motion was adopted

MADAM SPEAKER.—The clause by clause consideration of the Bill will be taken up tomorrow.

OBITUARY RESOLUTION

re: Demise of Sri H. K. Veeranna Gowda.

MADAM SPEAKER.—I regret to announce the sad demise of Sri H. K. Veeranna Gouda today who was a former member of this House and a former Minister,

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಒಂದು ನಿರ್ಣಯವನ್ನು ಸಭೆಯು ಮಂಡಿಡುವುದಕ್ಕೆ ತಮ್ಮ ಅಪ್ಪಣೆಯನ್ನು ಬೇಡುತ್ತೇನೆ. ಈ ನಿರ್ಣಯ ವೇನೆಂದರೆ :—

> "This House places on record its deep sense of sorrow at the sad and sudden demise of Sri H. K. Veerannna Gowda, a former member of this House and a former Minister and conveys its sympathy to the members of the bereaved family."

ಈ ಘನ ಸಭೆಯ ಅನೇಕ ಮಾನ್ಯ ಸದಸ್ಯರಿಗಳಿಗೆ ಗೊತ್ತಿರುವ ಹಾಗೆ, ದಿವಗಂತ ಶ್ರೀಮಾನ್ ಎಚ್. ಕೆ. ವೀರಣ್ಣಗೌಡರು ದೇಶದ ಸ್ವಾತಂತ್ರ್ಯ ಪ್ರಾಪ್ತಿಗಾಗಿ ಹೋರಾಟವನ್ನು ನಡೆಸಿದಂತವರು. ನಮ್ಮ ರಾಜ್ಯದಲ್ಲೇ ಅಲ್ಲ, ಇಡೀ ರಾಷ್ಟ್ರದಲ್ಲೇ ಅವರ ಕೀರ್ತಿ ಹರಡಿತ್ತು ಎಂದು ಹೇಳಿದರೆ, ಅದು ಉತ್ಪ್ರೇಕ್ಷೆಯಾಗಲಾರದು. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ, ಅನೇಕ ಮಾನ್ಯ ಸದಸ್ಯರಿಗೆ ತಿಳಿದಿರುವ ಹಾಗೆ, ೧೯೩೪ನೇ ಇಸವಿಯಲ್ಲಿ ಶಿವಪುರದಲ್ಲಿ ನಡೆದ ಕಾಂಗ್ರೇಸ್ ಅಧಿವೇಶನದಲ್ಲಿ, ಶ್ರೀಮಾನ್ ಎಚ್. ಕೆ. ವೀರಣ್ಣಗೌಡರು ಸ್ವಾತಂತ್ರ್ಯಕ್ಕಾಗಿ ದೊಡ್ಡಹೋರಾಟವನ್ನೇ ಪ್ರಾರಂಭ ಮಾಡಿದರು. ಅವರು, ಅಂದಿನಿಂದ

ಕಡೆಯವರೆಗೆ ಈ ಸಂಸ್ಥೆಯಲ್ಲಿ ಸದಸ್ಯರಾಗಿದ್ದ್ದು, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ನಡೆಸಿ, ಈ ಸಭೆಯ ಸದಸ್ಯರಾಗಿ, ಮತ್ತು ರಾಜ್ಯದ ಮಂತ್ರಿಗಳಾಗಿ ಅತ್ಯುತ್ತಮ ಕೆಲಸವನ್ನು ಮಾಡಿದ್ದಾರೆ ಅವರಂ ಮಾತಿನಲ್ಲಿ ಕಟುವಾಗಿದ್ದರೂ ಕೂಡ, ಅವರ ಹೃದಯ ಮಾತ್ರ ಬಸಳ ಮೃದು. ಸಾಮಾನ್ಯ ಜನರ ಹಿತದ ವಿಷಯದಲ್ಲಿ ಅವರಿಗೆ ಇದ್ದಂಥ ಅನುಕಂಪ ಎಲ್ಲರಿಗೂ ಗೊತ್ತಿದೆ. ದೇಶದ ಸ್ವಾತಂತ್ರ್ಯಪ್ರಾಪ್ತಿಗೆ ಹೋರಾಟ ಮಾಡಿದ ಕಾಲದಲ್ಲಿ ಮಾತ್ರವಲ್ಲ, ಅವರು ಸದಸ್ಯರಾಗಿ ಮಂತ್ರಿಗಳಾಗಿ ಕೆಲಸ ಮಾಡಿದಾಗಲೂ ಕೂಡ, ಸಾಮಾನ್ಯ ಜನರ ಹಿತರಕ್ಷಣೆಗಾಗಿ ಮತ್ತು ಹಳ್ಳಿಗಾಡಿನ ರೈತರಿಗೆ ಇದ್ದಂಥ ಕಷ್ಟ ಕಾರ್ಪಣ್ಯಗಳ ಬಗ್ಗೆ ತಮ್ಮ ಕೈಲಾದ ಮಟ್ಟಿಗೆ ಸುಧಾರಿಸುವುದಕ್ಕೆ ಸಮರ್ಥ ಪ್ರಯತ್ನವನ್ನೂ ಮಾಡಿದಂತವರು. ಅಂಥಾ ಮಹಾಪುರುಷರನ್ನು ನಾವು ಇವತ್ತಿನ ದಿವಸ ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಶಾಂತಿಯನ್ನು ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುವುದಲ್ಲದೆ, ಅವರ ಕುಟುಂಬ ವರ್ಗದವರಿಗೆ, ಇವರ ಮರಣ ದಿಂದಾದ ದುಃಖವನ್ನು ಸಹಿಸುವುದಕ್ಕೆ ಶಕ್ತಿಯನ್ನು ಕರುಣಿಸಲೆಂದೂ ಕೋರುತ್ತೇನೆ. ಘನ ಸಭೆಯು ಇದಕ್ಕೆ ಗೌರವ ಕೊಡಬೇಕೆಂದು ಹೇಳಿ, ನಿರ್ಣಯವನ್ನು ಸಭೆಯ ಮುಂದಿಡುತ್ತೇವೆ.

5-00 P.M.

† ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ವೀರಣ್ಣಗೌಡರು ಅದ್ವಿತೀಯ ಸ್ವಾತಂತ್ರ್ಯ ಹೋರಾಟಗಾರರು ಆಗಿದ್ದರು ಎನ್ನುವುದಕ್ಕಿಂತ ವಿಚಾರವನ್ನು ಈ ಸಂತಾಪಸೂಚಕ ನಿರ್ಣಯವನ್ನು ಖಂಡಿತವಾಗಿ ಶ್ರೀಮಾನ್ ಹುಚ್ಚಮಾಸ್ತಿಗೌಡರು ತಿಳಿಸಿರುವ ವಿಚಾರವು ಇಡೀ ರಾಜ್ಯಕ್ಕೆ ಗೊತ್ತಿರುವಂಥಾದು ಆಗಿದೆ. ಆಗಿನ ಕಾಲದಲ್ಲಿ ಕಾಂಗ್ರೇಸ್ ಸಂಸ್ಥೆಯನ್ನು ಸೇರಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುತ್ತಿದ್ದಾಗ ಎಷ್ಟು ಕಷ್ಟಗಳಿಂದ ಕೂಡಿತ್ತು ಎನ್ನುವುದಕ್ಕಿಂತ ವಿಚಾರವು ಅಂದಿನ ಹಿರಿಗೆಯವರಾದ ಅನೇಕರಿಗೆ ಗೊತ್ತಿದೆ. ಆಗಿನ ಕಾಲದಲ್ಲಿ ಯಾವ ವಿಧವಾದ ಭಯವನ್ನೂ ಇಟ್ಟುಕೊಳ್ಳದೇ ಇಡೀ ಕರ್ನಾಟಕ ರಾಜ್ಯವನ್ನೆಲ್ಲಾ ಸುತ್ತಿ ಜನಗಳನ್ನು ಸಂಘಟಣೆ ಮಾಡಿ ಜನಗಳಲ್ಲಿ ಸ್ವಾತಂತ್ರ್ಯದ ಬಗ್ಗೆ ಒಂದು ಕಿಡಿಯನ್ನು ಹೊತ್ತಿಸಿ ಕೊನೆಯತನಕವೂ ಈ ಸ್ವಾತಂತ್ರ್ಯ ಹೋರಾಟ ಯಶಸ್ವಿಯಾಗಿ ಸಾಗುವುದಕ್ಕೆ ಶ್ರೀ ವೀರಣ್ಣಗೌಡರು ನೇತಾರರಾಗಿದ್ದರು. ಅವರು ಎಂದೂ ಸತ್ಯವನ್ನು ಮರಮಾಚತಕ್ಕಂಥ ಜನರನ್ನು ಸಹಿಸತಕ್ಕಂಥವರಾಗಿರಲಿಲ್ಲ. ಅವರು ಒಬ್ಬ ಧೀರ ಸ್ವಾತಂತ್ರ್ಯ ಹೋರಾಟ ಗಾರರು ಹೇಗೋ ಹಾಗೆಯೇ ಪ್ರಬುದ್ಧ ರಾಜಕಾರಣಿಯೂ ಸಹ ಆಗಿದ್ದರು. ಮೇಲಾಗಿ ಶ್ರೀಮಾನ್ ಹುಚ್ಚಮಾಸ್ತಿಗೌಡರು ಹೇಳಿದಹಾಗೆ ಗ್ರಾಮಾಂತರ ಪ್ರದೇಶದ ಜನರ ಮೇಲೆ, ಅವರ ಕಷ್ಟಕಾರ್ಪಣ್ಯಗಳ ಬಗ್ಗೆ ವಿಶೇಷ ಸಹಾನುಭೂತಿಯನ್ನು ಇಟ್ಟುಕೊಂಡು ಅವರ ಮೇಲ್ಮೆಗಾಗಿ ಸದಾ ದೀಕ್ಷಾಬದ್ಧರಾಗಿ ಅವರ ಜೀವಿತಕಾಲದಲ್ಲಿ ದುಡಿದರು. ಅವರು ಇಷ್ಟೆಲ್ಲಕ್ಕೂ ಬಾಧ್ಯರಾಗಿ ಇದ್ದುದರ ಜೊತೆಗೆ ಅವರು ಸಾಹಿತ್ಯದ ವಿಚಾರದಲ್ಲಿ ವಿಶೇಷವಾದ ಬಲವನ್ನೂ, ಪಕ್ಷಪಾತವನ್ನೂ ಇಟ್ಟುಕೊಂಡು ಇಡೀ ಜೀವನವನ್ನೆಲ್ಲಾ ಸಾಹಿತ್ಯಾಭ್ಯಾಸ ಮತ್ತು ಅದರ ಬಗ್ಗೆ ವಿಶೇಷವಾದ ಆಸಕ್ತಿಯನ್ನು ಇಟ್ಟುಕೊಂಡು ಸಾಹಿತ್ಯ ಮತ್ತು ಸಂಸ್ಕೃತಿಯ ವಿಷಯದಲ್ಲಿಯೂ ಸಹ ಅಧ್ಯಯನವನ್ನು ಮಾಡಿ ಸ್ವತಂತ್ರವಾಗಿ ಕೆಲವು ಕೃತಿಗಳನ್ನು ರಚಿಸಿದರು ಎಂದು ಈ ಸಂದರ್ಭದಲ್ಲಿ ಸ್ಮರಿಸಬಹುದಾಗಿದೆ. ಈ ಸಮಯದಲ್ಲಿ ಅವರ ಬಗ್ಗೆ ಹೆಚ್ಚಾಗಿ ಹೇಳಬಯಸದೇ ಈ ಒಂದು ಸಂತಾಪಸೂಚಕ ನಿರ್ಣಯವನ್ನು ಮಾನ್ಯ ಮಂತ್ರಿಗಳು ಏನು ತಂದಿದ್ದಾರೆ ಅದಕ್ಕೆ ಬೆಂಬಲವನ್ನು ಕೊಡುತ್ತಾ, ಅವರ ಕುಟುಂಬದವರಿಗೆ ಈ ಒಂದು ಕಷ್ಟವನ್ನು ಭರಿಸುವಂತ ಶಕ್ತಿಯನ್ನು ಭಗವಂತನು ಅವರಿಗೆ ಕೊಡಲಿ ಮತ್ತು ಅವರು ಯಾವ ಒಂದು ಆದರ್ಶಕ್ಕಾಗಿ ಇಡೀ ಜೀವ ಮಾನವನ್ನು ಯಾವ ಅನಿಷ್ಟ ಶಕ್ತಿಗಳ ಜೊತೆಯಲ್ಲಿ ಅಥವಾ ಅವರು ಅನಿಷ್ಟ ವ್ಯಕ್ತಿಗಳು ಎಂದು ಯಾರನ್ನು ತಿಳಿದುಕೊಂಡಿದ್ದರೋ ಅವರ ಬಗ್ಗೆ ಎಂದೂ ರಾಜಿಯನ್ನು ಮಾಡಿಕೊಳ್ಳದೇ ಧೀರ ನಿಲುವಿನಿಂದ ಹೋರಾಟ ಮಾಡಿದರೋ ಅಂತಹ ಒಂದು ಆದರ್ಶ ನಮ್ಮೆಲ್ಲರಿಗೂ ಒಂದು ಉತ್ತಮವಾದ ಆದರ್ಶವಾಗಿದೆ. ಆ ಒಂದು ಆದರ್ಶವು ನಮ್ಮ ಮುಂದಿನ ಹಿರಿಗೆಯವರಿಗೂ ಉತ್ತಮವಾದ ಆದರ್ಶವಾಗಿದೆ. ಆ ಒಂದು ಆದರ್ಶವನ್ನು ನಾವೆಲ್ಲರೂ ಕಾಪಾಡಬೇಕೆಂದೂ ಈ ಸಂದರ್ಭದಲ್ಲಿ ಹೇಳಿ ಮಾನ್ಯ ಮಂತ್ರಿಯವರು ತಂದಿರುವಂಥ ಈ ಒಂದು ನಿರ್ಣಯವನ್ನು ಸಂಪೂರ್ಣವಾಗಿ ಅನುಮೋದಿಸಿ ನನ್ನ ಮಾತನ್ನು ಮುಂಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಚೆ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ನಮಗೆ ಪೂಜ್ಯರೂ ಹಿರಿಯರೂ ಆದಂತ ಶ್ರೀಮಾನ್ ವೀರಣ್ಣಗೌಡರು ಈ ದಿನ ಹಠಾತ್ತನೆ ನಿಧನರಾದ ವಿಚಾರವನ್ನು ಕೇಳಿ ಬಹಳ ಶೋಕವನ್ನು ಪಡಬೇಕಾಗಿದೆ. ಏಕೆಂದರೆ ಶ್ರೀಮಾನ್ ವೀರಣ್ಣಗೌಡರು ಮತ್ತು ಅವರ

ಧರ್ಮಪತ್ನಿಯವರಾದ ಶ್ರೀಮತಿ ತಾಯಮ್ಮನವರ ಜೊತೆಯಲ್ಲಿ ನಾವು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟ ಮಾಡತಕ್ಕಂಥ ಕಾಲದಲ್ಲಿ ಅನೇಕ ಸಂದರ್ಭದಲ್ಲಿ ಒಟ್ಟಾಗಿ ಕೆಲಸಮಾಡಿದ್ದೇವೆ. ಅವರು ಯಾವತ್ತೂ ಕೂಡ ನ್ಯಾಯವಾದದ್ದನ್ನು ನ್ಯಾಯವಾಗಿಯೂ, ಕಠಿಣವಾಗಿಯೂ ಮಾತನಾಡತಕ್ಕಂಥ ಸ್ವಭಾವವುಳ್ಳವರೂ, ಅವರು ಉತ್ತಮರಾದ ಪತ್ರಿಕಾಕರ್ತರೂ ಆಗಿದ್ದರೂ, ಅವರು ಅನೇಕ ಪತ್ರಿಕೆಗಳನ್ನು ನಡೆಸುತ್ತಿದ್ದರು. ಒಂದು ಒಕ್ಕಲಿಗರ ಪತ್ರಿಕೆಯನ್ನೂ ನಡೆಸುತ್ತಿದ್ದರು ಮತ್ತು ಅವರದೇ ಆದ ಸ್ವಂತ ಪತ್ರಿಕೆಯನ್ನೂ ಸಹ ನಡೆಸುತ್ತಿದ್ದರು. ಹಿಂದೆ ನಾನು ಕಾಂಗ್ರೆಸ್ ಸಂಸ್ಥೆಯಲ್ಲಿ ಸದಸ್ಯನಾಗಿದ್ದಾಗ ಕಾರ್ಪೊರೇಟರ್‌ಗಳನ್ನು ಕರೆಸಿ ಭೀಮಾರಿ ಹಾಕುತ್ತಿದ್ದುದನ್ನೂ, ಆಷ್ಟು ಕಠಿಣವಾಗಿ ಮಾತನಾಡುತ್ತಿದ್ದುದನ್ನೂ, ಆ ಒಂದು ದಿಟ್ಟತನವನ್ನೂ ನೋಡಿದರೆ ಅವರು ಎಂತಹ ವ್ಯಕ್ತಿ ಎಂದು ಗೊತ್ತಾಗುತ್ತದೆ. ಅವರು 47 ಜನ ಕಾರ್ಪೊರೇಟರ್‌ಗಳನ್ನು ಕರೆಸಿ ಅವರ ಜೊತೆಯಲ್ಲಿ ಕುಳಿತುಕೊಂಡು ನಿಮ್ಮಲ್ಲಿ ಅಯೋಗ್ಯರು ಇದ್ದಾರೆ. ಅವರು ಮಾತನಾಡತಕ್ಕಾಂಥಾದ್ದು ಸರಿಯಲ್ಲ ಎಂದು ಧೈರ್ಯವಾಗಿ ಹೇಳುವಂತ ವ್ಯಕ್ತಿಗಳು ಈಗ ಅಪರೂಪ. ಈ ವಿಚಾರ ರಾಜಕೀಯದಲ್ಲಿ ಸ್ವಲ್ಪ ದೂರವಾದರೂ ಕೂಡ ಅವರು ಅಧ್ಯಾತ್ಮಿಕವಾಗಿ ಹೆಚ್ಚಿನ ಅಭ್ಯಾಸವನ್ನು ಇಟ್ಟುಕೊಂಡು ಜೀವನವನ್ನು ನಡೆಸುತ್ತಿದ್ದರು. ಅವರು ರೈತರ ನಿಜವಾದ ಬಂಧುಗಳಾಗಿದ್ದರು. ಅವರ ನಿಧನದಿಂದ ಅಪಾರವಾದ ನಷ್ಟವಾಗಿದೆ. ಮಾನ್ಯ ಮಂತ್ರಿಯವರು ತಂದಿರತಕ್ಕ ಈ ಒಂದು ನಿರ್ಣಯಕ್ಕೆ ನಾನು ಪೂರ್ಣವಾದ ಬೆಂಬಲವನ್ನು ಕೊಟ್ಟು ಅವರ ಆತ್ಮಕ್ಕೆ ಶಾಂತಿ ದೊರಕಲೆಂದು ಹೇಳಿ, ಅವರ ಕುಟುಂಬವರ್ಗಕ್ಕೆ ಈ ಸಂಕಟವನ್ನು ಬರಿಸತಕ್ಕಂಥ ಶಕ್ತಿಯನ್ನು ಭಗವಂತನು ಕೊಡಲಿ ಎಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ.ಎಸ್. ಕೃಷ್ಣನ್, (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೇ, ಮಾನ್ಯ ವೀರಣಗೌಡರು ನಾನು ವಿದ್ಯಾರ್ಥಿಯಾಗಿದ್ದಾಗಿ ಅವರು ನನಗೆ ಪರಿಚಿತರಾಗಿದ್ದರು. ಅವರ ಬಗ್ಗೆ ಹೇಳಬೇಕೆಂದರೆ ಅವರು ಖಂಡಿತವಾದಿಗಳಾಗಿದ್ದರು. ಆ ದಿನದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ನಡೆಸಬೇಕೆಂಬ ಪ್ರಶ್ನೆ ಬಂದಾಗ ಆ ಸಂದರ್ಭದಲ್ಲಿ ನಾನು ಅವರನ್ನು ಸಂದಿಸಿ ಮಾತನಾಡಿದಾಗ ಅವರು ಯಾವ ಒಂದು ಧ್ಯೇಯವನ್ನು ಇಟ್ಟುಕೊಂಡಿದ್ದರು ಎಂದರೆ ಜವಾಬ್ದಾರಿ ಸರ್ಕಾರದ ಹೋರಾಟದಲ್ಲಿ ನಾವು ಈ ದಿನ ಯಾರು ಜವಾಬ್ದಾರಿ ಸರ್ಕಾರ ಬೇಡ ಎಂದು ಹೇಳುತ್ತಾರೆ ಅಂತಹವರ ಜೊತೆಯಲ್ಲಿಯೇ ಆಗಲೀ, ಯಾರು ಜವಾಬ್ದಾರಿ ಸರ್ಕಾರ ಎಂದು ಹೇಳುವುದನ್ನು ಬಿಟ್ಟು ಬೇರೆ ರೀತಿಯಲ್ಲಿ ಸರ್ಕಾರವನ್ನು ರಚನೆ ಮಾಡಬೇಕೆಂದು ಯೋಚನೆ ಮಾಡತಕ್ಕಂಥವರ ಜೊತೆಯಲ್ಲಿ ಯಾವ ಒಪ್ಪಂದವನ್ನೂ ಮಾಡಿಕೊಳ್ಳಕೂಡದು ಕಡೆಯವರೆಗೂ ಪೂರ್ಣವಾಗಿ ಸ್ವಾತಂತ್ರ್ಯಕ್ಕಾಗಿ, ಒಂದು ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟವನ್ನು ನಡೆಸಿ ಬೇಕೆಂದು ಹೇಳಿ ಅದಕ್ಕಾಗಿ ಅವರು ಬಹಳವಾಗಿ ಶ್ರಮಿಸಿದರು. ಮಾನ್ಯ ಮಂತ್ರಿಯವರು ಹೇಳಿದ ಹಾಗೆ ನಮ್ಮ ಕರ್ನಾಟಕರಾಜ್ಯದಲ್ಲಿ, ಹಳೆಯ ಮೈಸೂರಿನಲ್ಲಿ ಇದ್ದಂತ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಮೊದಲಿಗರಾಗಿದ್ದರು ಮತ್ತು ಅಗ್ರಗಣ್ಯರಾಗಿದ್ದರು, ಕಾಂಗ್ರೆಸ್ ಪಕ್ಷವನ್ನು ಸ್ಥಾಪಿಸುವುದಕ್ಕೆ ನೆರವಾಗಿದ್ದರಲ್ಲದೇ ಅನೇಕ ಕಷ್ಟನಷ್ಟಗಳನ್ನೂ ಜೀವನದಲ್ಲಿ ಅನುಭವಿಸಿದ್ದರು, ಸ್ವಾತಂತ್ರ್ಯ ಬಂದಮೇಲೆ ಮಂತ್ರಿಯವರಾಗಿ ದಕ್ಷತೆಯಿಂದ ಆಡಳಿತವನ್ನು ನಡೆಸಿದರು ಎನ್ನುವುದೂ ನಿಜ. ಈ ಸಂದರ್ಭದಲ್ಲಿ ಹೇಳುವುದಾದರೆ ಅವರು ಅನೇಕ ವಿಷಯಗಳಲ್ಲಿ ಅವರು ಚರ್ಚೆ ಮಾಡಿದ್ದಾರೆ. ಆಗ ಭೂಸುಧಾರಣೆ ಮಸೂದೆಯ ವಿಚಾರವಾಗಿ ಕರ್ನಾಟಕ ಏಕೀಕರಣದ ವಿಚಾರವಾಗಿ ಭಿನ್ನಭಿಪ್ರಾಯಗಳು ಇದ್ದವು. ಈ ಭಿನ್ನಾಭಿಪ್ರಾಯಗಳು ಇದ್ದರೂ ಸಹ ಅವು ಕಡೆಯತನಕ ಇರಲಿಲ್ಲ. ಅವರು ಕರ್ನಾಟಕ ಏಕೀಕರಣವನ್ನು ಒಪ್ಪಿಕೊಂಡು ಅದನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿದೆಯೆಂದು ಹೇಳುತ್ತಿದ್ದರು ಇಂತಹ ಧೀಮಂತ ನಾಯಕರು ಎಂತಹ ಪ್ರಶ್ನೆ ಬಂದರೂ ಸಹ ಅದನ್ನು ಸಾಧಿಸಬೇಕು ಎಂದು ಹೇಳಿ ಅದಕ್ಕಾಗಿ ಯೋಚನೆ ಮಾಡುತ್ತಿದ್ದರು. ಇಂತಹ ನಾಯಕರನ್ನು ಕಳೆದುಕೊಂಡಿರುವುದರಿಂದ ಕರ್ನಾಟಕ ರಾಜ್ಯಕ್ಕೆ ಅಪಾರ ನಷ್ಟವಾಗಿದೆ. ಅವರ ಕುಟುಂಬವರ್ಗದವರಿಗೆ ಕಷ್ಟಗಳನ್ನು ಭರಿಸಲಿಕ್ಕೆ ಶಕ್ತಿಯನ್ನು ಕೊಡಲಿ ಎಂದು ಹಾರೈಸಿ ಮಾನ್ಯ ಮಂತ್ರಿಯವರು ತಂದಿರತಕ್ಕ ನಿರ್ಣಯವನ್ನು ಅನುಮೋದಿಸುತ್ತೇನೆ.

† ಶ್ರೀ ಕೊಣಂದೂರು ಲಿಂಗಪ್ಪ (ತೀರ್ಥಹಳ್ಳಿ).— ಮಾನ್ಯ ಅಧ್ಯಕ್ಷರೇ, ನನ್ಮಾನ್ಯ ಕಂದಾಯ ಸಚಿವರಾದ ಹುಚ್ಚಮಾಸ್ತಿಗೌಡರು ಮಂಡಿಸಿರತಕ್ಕಂಥ ಸಂತಾಪಸೂಚಕ ನಿರ್ಣಯ ಏನಿದೆ ಅದಕ್ಕೆ ನಮ್ಮ ಸಂಪೂರ್ಣವಾದ ಸಹಮತವನ್ನು ವ್ಯಕ್ತಪಡಿಸಿ ಶ್ರೀಮಾನ್ ವೀರಣ್ಣಗೌಡರ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ನಾನು ಅನುಭವದಿಂದ, ವಯಸ್ಸಿನಿಂದ ಅವರ ಬಗ್ಗೆ ಹೇಳುವಷ್ಟು ವಯಸ್ಸನ್ನು ನನಗೆ ಇಲ್ಲ. ನಾನು ಇನ್ನೂ ಚಿಕ್ಕವಯಸ್ಸಿನವನು. ಅವರ 1938ರಲ್ಲಿ ಶಿವಪುರ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ವರ್ಷದಲ್ಲಿ ನಾನು ಜನಿಸಿದವನು. ಇಂತಹ ಹಿರಿಯರು ನಮಗೆ ತಂದಂಥ ಸ್ವಾತಂತ್ರ್ಯ ನಮಗೆ ಪಿತ್ರಾರ್ಜಿತ ಆಸ್ತಿಯಾಗಿದೆ. ನಾನು ಬೆಂಗಳೂರಿಗೆ ಬಂದಮೇಲೆ ಅವರ ದೂರದ ಪರಿಚಯವಾಯಿತು. ಆನಂತರ ಸ್ವಲ್ಪ ಹತ್ತಿರದ ಪರಿಚಯವಾದದ್ದು, ನನ್ನ ಗುರುಗಳಾದ ದಿವಂಗತ ಶ್ರೀ ಶಾಂತವೇರಿ ಗೋಪಾಲಗೌಡ ಅವರ ಮೂಲಕ ಶ್ರೀ ವೀರಣ್ಣ ಗೌಡರ ದರ್ಶನಭಾಗ್ಯ ನನಗೆ ಕೇವಲ 4-5 ತಿಂಗಳ ಹಿಂದೆ ಲಭಿಸಿತು. ರಾಷ್ಟ್ರದ ಮತ್ತು ರಾಜ್ಯದ ಆಗುಹೋಗುಗಳ ಬಗ್ಗೆ ಅವರ ಕಳಕಳಿಯ ಮಾತುಗಳಿಂದಲೇ ಕೇಳಿ ನಾವು ಅನುಬವಿಸಿದ್ದೇವೆ.

ಅವರ ನಮಸ್ಕಾರಲೀನರು ಇಲ್ಲಿ ಅನೇಕರಿದ್ದಾರೆ. ಆ ಬಗ್ಗೆ ನಾನು ಹೇಳುವುದಕ್ಕೆ ಅಪೇಕ್ಷೆ ಪಡುವುದಿಲ್ಲ. ಮಾನ್ಯ ಕೃಷ್ಣಪ್ಪನವರು ಮಾತನಾಡುವಾಗ ಸಾಹಿತ್ಯ ಕ್ಷೇತ್ರದ ಒಲವನ್ನು ಏನು ಹೋಲಿಸಿದರೋ ಇದು 100ಕ್ಕೆ 100 ಸತ್ಯ. ಈ ಕ್ಷೇತ್ರದ ಒಲವಿನ ಅಪೂರ್ವ ಕಾಣಿಕೆಯಿಂದ ಅವರ ಶಿಷ್ಯೋತ್ತಮರನ್ನು ನಮ್ಮ ನಾಡಿಗೆ ಕೊಟ್ಟಿದ್ದಾರೆ. ಅವರಲ್ಲಿ ಒಬ್ಬರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿ. ನಾರಾಯಣ ಅವರು ದಿವಂಗತ ಪೂಜ್ಯ ವೀರಣ್ಣಗೌಡರ ಹೆಸರು ಈ ನಾಡಿನಲ್ಲಿ ವಿಧಾನಸೌಧ ಇರುವವರೆಗೆ ಅಜರಾಮರವಾಗಿ ಉಳಿಯುತ್ತದೆ ಎಂಬ ಮಾತನ್ನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ವಿಧಾನಸೌಧ ಕಟ್ಟಿಸಿದರೂ ಕೂಡ ಅದರ ಕಳಸವನ್ನು ಕಟ್ಟಿಸಿದವರು ವೀರಣ್ಣಗೌಡರು. ಇವತ್ತಿನ ದಿವಸ ಒಬ್ಬ ಐತಿಹಾಸಿಕವಾದ ವ್ಯಕ್ತಿಯನ್ನ ಕಳೆದುಕೊಂಡಿದ್ದೇವೆ ಎಂದು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಅವರ ಆದರ್ಶ ನಮಗೆ ದಾರಿದೀಪವಾಗಿರಲಿ ಎಂದು ಹೇಳಿ ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಹಾರೈಸಿ ಶ್ರೀಮಾನ್ ಹುಚ್ಚಮಾಸ್ತಿಗೌಡರು ಮಂಡಿಸಿರತಕ್ಕ ಸಂತಾಪ ಸೂಚಕನಿರ್ಣಯಕ್ಕೆ ಸಂಪೂರ್ಣ ಸಮ್ಮತಿಯನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MADAM SPEAKER.— I associate myself with the sentiments expressed by the Hon. Minister for Revenue and other Hon. members and as a mark of respect I request the Hon'ble members to stand in silence.

The Resolution was adopted nem-con, all the members Standing in Silence for two minutes,

MADAM SPEAKER —As a mark of respect I adjourn the House to meet again tomorrow at 1-p.m.

The House adjourned at fifteen minutes past five of clock to meet again at one of the clock on Thursday the 8th April 1976.